ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯಕರ್ನಾಟಕ
ದಿನಾಂಕ : DATE 6/1/2021

ಯೋಜನೆಗೆ 500 ಕೋಟಿ ರೂ. ವೆಚ್ಚ । ಬಸವಕಲ್ಯಾಣದಲ್ಲಿ ಬಿಎಸ್‌ವೈ ಅವರಿಂದ ಶಿಲಾನ್ಯಾಸ

# ನೂತನ ಅನುಭವ ಮಂಟಪಕ್ಕೆ ಅಡಿಗಲ್ಲು ಇಂದು

ವಿ.ಕ. 6/1/21

■ **ಭೀಮರಾವ್** ಬುರಾನಪುರ ಬೀದರ್
bhim.rao@timesgroup.com

ಬಸವ ಭಕ್ತರ ಬಹುದಿನಗಳ ಕನಸು ನನಸಾಗುವ ಸಮಯ ಬಂದಿದೆ. ಬಸವಕಲ್ಯಾಣದಲ್ಲಿ 'ನೂತನ ಅನುಭವ ಮಂಟಪ' ನಿರ್ಮಾಣಕ್ಕೆ ರಾಜ್ಯ ಸರಕಾರ ಮುಂದಾಗಿದೆ. ಜ.6 ರಂದು ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರು ಶಿಲಾನ್ಯಾಸ ನೆರವೇರಿಸಲಿದ್ದಾರೆ.ಈ ಅಂತಾರಾಷ್ಟ್ರೀಯ ಮಟ್ಟದ ಅನುಭವ ಮಂಟಪ ಇನ್ನು ಮುಂದೆ ಇಡೀ ಜಗತ್ತಿನ ಗಮನ ಸೆಳೆಯಲಿದೆ.

ಬಸವಕಲ್ಯಾಣದ ತ್ರಿಪುರಾಂತ ಕೆರೆ ದಂಡೆಯಲ್ಲಿರುವ 72 ಎಕರೆಯಲ್ಲಿನ 7.5 ಎಕರೆನಲ್ಲಿ ಅನುಭವ ಮಂಟಪ ಕಟ್ಟಡ ನಿರ್ಮಾಣಗೊಳ್ಳಲಿದೆ. ಅಂದಾಜು 500 ಕೋಟಿ ರೂ. ವೆಚ್ಚದ ಈ ವೃತ್ತಾಕಾರದ ಪ್ರಧಾನ ಕಟ್ಟಡದ ಒಟ್ಟು ಎತ್ತರ 182 ಅಡಿ, ಸುತ್ತಳತೆ 1884 ಅಡಿ ಇರಲಿದ್ದು, ಸಿಮೆಂಟ್ ಹಾಗೂ ಕಲ್ಲಿನ ಕಟ್ಟಡ ಇದಾಗಲಿದೆ. ತಜ್ಞರ ಸಲಹಾ ಸಮಿತಿಯ ವರದಿಯಂತೆ ಬೆಂಗಳೂರಿನ •ನೇಚರ್ ಆ್ಯಂಡ್ ನರ್ಚರ್ ಎಂಟರ್‌ಪ್ರೈಸೆಸ್‌ ಇದರ ವಿನ್ಯಾಸಕಾರರಾಗಿದ್ದು, ಬಸವಕಲ್ಯಾಣ ಅಭಿವೃದ್ಧಿ



ಅನುಭವ ಮಂಟಪದ ನೀಲನಕ್ಷೆ.

ಮಂಡಳಿಯು ನಿರ್ಮಾಣ, ನಿರ್ವಹಣೆ ಮಾಡಲಿದೆ.

ವಿದ್ವಾಂಸ ಗೋ.ರು. ಚನ್ನಬಸಪ್ಪ ಅವರ ನೇತೃತ್ವದ ತಜ್ಞರ ಸಲಹಾ ಸಮಿತಿ 2017ರಲ್ಲಿ ನೀಡಿರುವ ವರದಿಯನ್ವಯ ಅನುಭವ ಮಂಟಪ ನಿರ್ಮಾಣವಾಗಲಿದೆ. ಅನುಭವ ಮಂಟಪ ನಿರ್ಮಾಣವಾಗುವ ಕ್ಷೇತ್ರವನ್ನು 'ಮಹಾಮನೆ ಕ್ಷೇತ್ರ' ಎಂದು ಕರೆಯಲಾಗುತ್ತದೆ. ಆಧುನಿಕವಾದರೂ ಅನುಭವ ಮಂಟಪದ ರಚನೆ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿರಲಿದೆ. ಸಿಮೆಂಟ್ ಕಟ್ಟಡ ನಿರ್ಮಿಸಲು 2-2.50 ವರ್ಷ ಹಾಗೂ ಕಲ್ಲಿನ ಕಟ್ಟಡ ನಿರ್ಮಿಸಲು

**● ಬಸವಕಲ್ಯಾಣದಲ್ಲಿ 500 ಕೋಟಿ ವೆಚ್ಚದ ನೂತನ ಅನುಭವ ಮಂಟಪ ನಿರ್ಮಾಣಕ್ಕೆ ಮುಖ್ಯಮಂತ್ರಿಗಳು ಘೋಷಿಸಿದ್ದು, ಈಗಾಗಲೇ 100 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ.**

**- ಪ್ರಭು ಚವ್ಹಾಣ್**
ಜಿಲ್ಲಾ ಉಸ್ತುವಾರಿ ಸಚಿವ, ಬೀದರ್

4-5 ವರ್ಷಗಳ ಕಾಲಾವಕಾಶ ಬೇಕಾಗಲಿದೆ. ಅನುಭವ ಮಂಟಪದ ಕಟ್ಟಡದ ತುದಿಯಲ್ಲಿ 100 ಅಡಿ ವ್ಯಾಸದ ಬೃಹತ್ ಲಿಂಗಾಕಾರದ ಗೋಪುರ ಇರಲಿದ್ದು, ಅತ್ಯುನ್ನತ ತಾಂತ್ರಿಕ ರೊಬಾಟಿಕ್ಸ್ ವ್ಯವಸ್ಥೆ ಹೊಂದಲಿದೆ.

ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿ ಹವಾ ನಿಯಂತ್ರಣ, ಬೃಹತ್ ದಾಸೋಹ ಭವನ, ಬೃಹತ್ ಥೀಮ್ ಟೇರೆಸ್ ಗಾರ್ಡನ್, ಪ್ರಥಮ ವಾಯುವಿಹಾರ ಪ್ರತಿಮೆಗಳು, ಬೃಹತ್ ಬಯಲು ರಂಗ ಮಂದಿರ, ಜಲ ಸಂರಕ್ಷಣೆಯ ಅತ್ಯಾಧುನಿಕ ಬೃಹತ್ ವ್ಯವಸ್ಥೆ, ಐತಿಹಾಸಿಕ ಮತ್ತು ಆಧುನಿಕ ಪರಿಕಲ್ಪನೆಗಳ ಸಂಯೋಜನೆಯಾಗಿರಲಿದೆ. ಆರು ಅಂತಸ್ತುಗಳ ಅನುಭವ ಮಂಟಪದ ಪ್ರತಿಯೊಂದು ಅಂತಸ್ತಿನಲ್ಲೂ ಶರಣರ ಜೀವನ, ಸಂದೇಶಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಬಿಂಬಿಸಲಾಗುತ್ತದೆ. ಕಟ್ಟಡದ ಒಟ್ಟು ವಿನ್ಯಾಸ ಗೋಡೆ, ದ್ವಾರ, ಮೆಟ್ಟಿಲು, ಕಂಬ ಇತ್ಯಾದಿಗಳಲ್ಲಿ ಶರಣ ಸಿದ್ಧಾಂತದ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಕಾಯಕ, ದಾಸೋಹ, ಅನುಭಾವ ಸೂತ್ರಗಳನ್ನು ಸಂಕೇತಿಸಲಿದೆ. ನಿವೇಶನದ ಮಧ್ಯ ಭಾಗದ ಎತ್ತರದ ದಿಣ್ಣೆಯ ಮೇಲೆ ಅನುಭವ ಮಂಟಪ ಇರಲಿದ್ದು, ಕಲಾತ್ಮಕ ಸುತ್ತುಗೋಡೆ, ಮಹಾದ್ವಾರವೂ ಇರಲಿದೆ.

ಕಟ್ಟಡದ ನೆಲ ಮಾಳಿಗೆಯಲ್ಲಿ ಒಟ್ಟು 1000 ಜನರ ಪ್ರಸಾದ ಸ್ವೀಕರಿಸುವ ದಾಸೋಹ ಭವನ ಇರಲಿದೆ. 12ನೇ ಶತಮಾನದ ಅನುಭವ ಮಂಟಪದ ಪ್ರತಿರೂಪವಾಗಿ 770 ಆಸನಗಳುಳ್ಳ ಸುಸಜ್ಜಿತ ಸಭಾ ಭವನ ಇರಲಿದೆ. ಈ ಮಹಾಮನೆಯ ಕ್ಷೇತ್ರದಲ್ಲಿ ಸ್ವಾಗತ, ಭದ್ರತೆ, ಆಡಳಿತ, ಆತಿಥ್ಯ, ಗ್ರಂಥಾಲಯ, ಸಂಶೋಧನೆ, ಗೋಷ್ಠಿ, ಅನುಷ್ಠಾನ, ಯೋಗ, ಧ್ಯಾನ, ಸ್ನಾನ, ಶೌಚಾಲಯ ಸೇರಿ ಹಲವು ಸೌಲಭ್ಯಗಳ ಕಟ್ಟಡಗಳೂ ಇರಲಿವೆ.